Reg. No. | | | | | | | | | |

# BCMKALN 201

## II Semester B.Com. Degree Examination, September 2022
## (NEP 2020 – 2021-22 Batch Onwards)
## KANNADA
## Kannada Language (AECC)

Time : 2 Hours Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) ಸರೋವರದಲ್ಲಿ ಅಡಗಿ ಕುಳಿತ ಸುಯೋಧನನನ್ನು ಭೀಮಸೇನನು ಮೂದಲಿಸಿದ ಬಗೆಯನ್ನು ವಿವರಿಸಿ.

**ಅಥವಾ**

ನಂಬಿಯಣ್ಣನ ವಿವಾಹ ಮಂಟಪದಲ್ಲಿ ವೃದ್ಧ ಮಾಹೇಶ್ವರ ಮಾಡಿದ ಅವಾಂತರಗಳೇನು ? ವಿವರಿಸಿ.

2) ನಿರೂಪಕರ ಮನೆ ಮಂದಿಯ ನಿತ್ಯ ಬದುಕಿನಲ್ಲಿ ಕುದುರೆಯ ಪಾತ್ರ ಹೇಗಿತ್ತು? ವಿಶ್ಲೇಷಿಸಿರಿ.

**ಅಥವಾ**

ಹೆಂಡತಿಯನ್ನು ಕಳೆದುಕೊಂಡ ರಾಜರಾಂ ವೃದ್ಧಾಶ್ರಮದ ಪಾಲಾದುದು ಹೇಗೆ ? ವಿವರಿಸಿರಿ.

3) ಹಳ್ಳಿಯೊಂದು ಕ್ರಾಂತಿಕಾರಕ ಬದಲಾವಣೆಯತ್ತ ಸಾಗುತ್ತಿರುವ ಚಿತ್ರಣ 'ಕಿರಗೂರಿನ ಗಯ್ಯಾಳಿಗಳು' ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

**ಅಥವಾ**

ಶಂಕ್ರಪ್ಪನ ಪಾತ್ರದ ವೈಶಿಷ್ಟ್ಯವನ್ನು ವಿಶದಪಡಿಸಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಕಡಲ ತೀರದ ಮಂದಿಯ ಜೀವನ ವೃತ್ತಾಂತ 'ಮೀನು ಪೇಟೆ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.

**ಅಥವಾ**

'ನನ್ನ ಪ್ರೀತಿಯ ಕುಕ್ಕರ್' ಕವಿತೆಯ ಸ್ವಾರಸ್ಯವನ್ನು ವಿವರಿಸಿರಿ.

2) ವಾಸನೆಯನ್ನು ಗ್ರಹಿಸುವ ಮೂಗಿನ ವೈಜ್ಞಾನಿಕ ಹಿನ್ನೆಲೆಯನ್ನು ವಿವರಿಸಿರಿ.

**ಅಥವಾ**

'ಇಲ್ಲಿಯ ಬದುಕು ಅಲ್ಲಿಯ ಸರಕು' ಪ್ರಬಂಧದ ಆಶಯವನ್ನು ಬರೆಯಿರಿ.

3) ಕಿರಗೂರಿನ ಹಳ್ಳಿಯ ವೈಶಿಷ್ಟ್ಯವೇನು ? ವಿವರಿಸಿ.

**ಅಥವಾ**

ದಾನಮ್ಮಳ ಪಾತ್ರದ ವೈಶಿಷ್ಟ್ಯವನ್ನು ಕಾದಂಬರಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

ನಿನ್ನನು ಜನರುಣ ಜಲಮಂ
ಮುನ್ನಂ ತವೆ ಪೀರ್ದೊಡಂಜಿ ನೀಂಪುಗೆ ಕೊಳನಂ
ಬೆನ್ನನೆ ಬಂದಾತಂ ಶೌ-
ರ್ಯೋನ್ನತನೀಯಿರ್ದನತ್ತಿ ಕೌರವಮಲ್ಲಂ

**ಅಥವಾ**

ನಿನ್ನೆವರೆಗೆ ಕಾಲಕಸ ಸದರದ ನೆರೆ
ದುಡಿತದ ಆಳಾಗಿದ್ದವಳ
ಇಂದು ಮಾತನಾಡಿಸಲು ಅಳುಕು
ಮುಟ್ಟಲು ಎದೆ ಡವಡವ
ಹಿಂದಿನಂತೆ ಉಪಯೋಗಿಸಲು ಭಯ

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವವೊಲ್
2) ಹೇಗೆ ಒಪ್ಪಲಿ ಈಗ ಏನೂ ಉಳಿದಿಲ್ಲವೆಂಬ ದೂರು ?
3) ನಿನ್ನ ಅವ್ವನಲ್ಲಿ ಜಗದ ತಾಯಂದಿರು ಇದ್ದಾರೆ ಮಗೂ
4) ನಂಟುತನದ ಭಕ್ತಿ ನಾಯಕ ನರಕ, ಬಡವನ ಭಕ್ತಿ ನಿಧಾನ

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(1×8=8)**

1) ರನ್ನನ ಗುರು ಯಾರು ?
2) ಚೆನ್ನ ಬಸವಣ್ಣನ ವಚನಗಳ ಅಂಕಿತವೇನು ?
3) ಹರಿಹರನ ಚಂಪೂ ಕೃತಿ ಯಾವುದು ?
4) ಜಿ.ಟಿ. ನಾರಾಯಣರಾವ್ ಅವರ ಆತ್ಮಕಥೆಯ ಹೆಸರೇನು ?
5) 'ಅಪ್ಪ ಅಂದ್ರೆ ಆಕಾಶ' ಕೃತಿಯನ್ನು ಬರೆದ ಲೇಖಕರು ಯಾರು ?
6) ಜಿ.ಪಿ.ಬಸವರಾಜು ಸಂಪಾದಕರಾಗಿ ಕೆಲಸ ಮಾಡುತ್ತಿದ್ದ ಪತ್ರಿಕೆ ಯಾವುದು ?
7) 'ಕಿರಗೂರಿನ ಗಯ್ಯಾಳಿಗಳು' ಕಾದಂಬರಿಯನ್ನು ಬರೆದವರು ಯಾರು ?
8) ದಾನಮ್ಮನ ಗಂಡನ ಹೆಸರೇನು ?